# ಭೀಮ ಸಂಘ, ಕರ್ನಾಟಕ

## ಲೋಕಸಭಾ ಚುನಾವಣೆಯಲ್ಲಿ ನಿಂತುಕೊಳ್ಳುತ್ತಿರುವ ಅಭ್ಯರ್ಥಿಗಳಿಗೆ ನಮ್ಮ ಪ್ರಣಾಳಿಕೆ – 2019

ನಮ್ಮ 'ಭೀಮ ಸಂಘ' ದುಡಿಯುವ ಮಕ್ಕಳ ಸಂಘಟನೆ. ನಾವು ಈ ದೇಶದ ಪ್ರಜೆಗಳು. ನಮ್ಮ ಕನಸಿನ ಭಾರತ ದೇಶದಲ್ಲಿ ಈ ಎಲ್ಲಾ ಕೆಳಗಿನ ಅಂಶಗಳು ನಿಜವಾಗಿ ನಮಗೆ ದಕ್ಕಿ ನಮ್ಮ ಎಲ್ಲಾ ಹಕ್ಕುಗಳು ನಮಗೆ ಸಿಗಲಿ ಎಂದು ನಮ್ಮ ಆಕಾಂಕ್ಷೆ. ದುಡಿಯುವ ಮಕ್ಕಳಾದ ನಾವು ನಮ್ಮ ಹಕ್ಕುಗಳ ಬಗ್ಗೆ ಚರ್ಚಿಸುತ್ತ ನಮ್ಮ ಕನಸಿನ ಭಾರತ ಹೇಗಿರಬೇಕು ಎಂದು ಆಶಿಸಿ ಈ ಪ್ರಣಾಳಿಕೆಯನ್ನು ತಯಾರಿಸಿದ್ದೇವೆ. ನಾವು ಕಂಡಿರುವ ಈ ಕನಸನ್ನು ನೀವು ನಿಜ ಮಾಡುವುದಾದರೆ, ಹಾಗೆ ಮಾಡುತ್ತೇನೆಂದು ನೀವು ಬರವಣಿಗೆಯ ಮೂಲಕ ಮಾತು ಕೊಡುವುದಾದರೆ, ನಿಮಗೆ ನಮ್ಮ ಹಾಗು ನಮ್ಮ ಮನೆಯವರ ಬೆಂಬಲ ನೀಡುತ್ತೇವೆ. ನಮ್ಮ ಕನಸಿನ ಭಾರತ ಹೀಗಿರುತ್ತದೆ:

## <u>ನಮ್ಮ ಪ್ರಣಾಳಿಕೆ</u>

### <u>ನಮ್ಮ ರಕ್ಷಣೆಯ ಹಕ್ಕು</u>:

- **<u>ದುಡಿಯುವ ಸ್ಥಳದಲ್ಲಿ ನಮ್ಮ ರಕ್ಷಣೆ</u>:** ನಾವು ಕೆಲಸ ಮಾಡುವ ಸ್ಥಳದಲ್ಲಿ ರಕ್ಷಣೆ ಸಿಗುತ್ತದೆ. ನಮ್ಮ ಬಗ್ಗೆ ಕಾಳಜಿಯನ್ನು ವಹಿಸಲಾಗುತ್ತದೆ. ನಮ್ಮ ನಡುವೆ ಯಾವುದೇ ಬೇಧಭಾವ ಆಗುವುದಿಲ್ಲ. ನಮ್ಮ ಹಾಗು ಶಿಕ್ಷಣ ಪಡೆಯುವ ಮಕ್ಕಳ ನಡುವೆ ಯಾವ ರೀತಿಯ ತಾರತಮ್ಯ ಇರುವುದಿಲ್ಲ. ನಮಗೆ ಅವಮಾನ ಆಗುವುದಿಲ್ಲ. ಹೊಟೇಲಿನಲ್ಲಿ ನಮಗೆ ಅಲ್ಲಿಗೆ ಬರುವ ಜನರಿಂದ ರಕ್ಷಣೆ ಸಿಗುತ್ತದೆ. ರಕ್ಷಣೆಯ ಹೆಸರಿನಲ್ಲಿ ನಮ್ಮನ್ನು ಹಿಡಿದುಕೊಂಡು ಹೋಗಿ ಯಾವುದೇ ರೀತಿಯ ಶೋಷಣೆ ಮಾಡುವುದಿಲ್ಲ.




<u>ಚಿತ್ರ 1</u>: ಇಲ್ಲ ಕೆಲಸ ಮಾಡುವ ಸ್ಥಳದಲ್ಲಿ ರಕ್ಷಣೆಯ ಕುರಿತು ಚಿತ್ರಿಸಿದ್ದೇವೆ




<u>ಚಿತ್ರ 2</u>: ಇಲ್ಲಿ ಮನೆಕೆಲಸ ಮಾಡುವ ಮಕ್ಕಳಿಗೆ ರಕ್ಷಣೆಯ ಕುರಿತು ಚಿತ್ರಿಸಿದ್ದೇವೆ

- **<u>ನಮ್ಮ ರಕ್ಷಣೆ:</u>** ಶಾಲೆಯ ರಜೆಯ ದಿನಗಳಲ್ಲಿ ನಾವು ಕೆಲಸ ಮಾಡಲು ಆಸಕ್ತಿ ಹಾಗು ಕೆಲಸ ಮಾಡಬೇಕಾದ ಪರಿಸ್ಥಿತಿ ಇದ್ದಲ್ಲಿ, ನಮ್ಮ ಕೆಲಸದ ವಿರುದ್ಧ ಯಾವುದೇ ಕಾನೂನು ಕ್ರಮವು ತೆಗೆದುಕೊಳ್ಳಲಾಗುವುದಿಲ್ಲ. ನಮ್ಮ ಕೆಲಸಗಳಲ್ಲಿ ಹಿಂಸೆ ಇರುವುದಿಲ್ಲ. ನಮಗೆ ಯಾವುದೇ ರೀತಿಯ ಒತ್ತಡ ಹಾಗು ಮಾನಸಿಕ ಹಿಂಸೆ ಇರುವುದಿಲ್ಲ. ಶಾಲೆಯ ರಜೆಯ ದಿನಗಳಲ್ಲಿ ಮನೆ ಕೆಲಸಗಳಿಗೆ ಹೋಗುವ ನಮಗೆ ಶಿಕ್ಷೆ, ಶೋಷಣೆ ಅಥವ ತೊಂದರೆಗಳು ಇರುವುದಿಲ್ಲ. ಹದಿಹರೆಯದವರಾದ ನಾವು ಸಿಮೆಂಟ್ ಕೆಲಸಕ್ಕೆ ಅಥವ ಬೇರೆ ಕೆಲಸಗಳಿಗೆ ಹೋದಾಗ ಅಲ್ಲಿ ಅವರಿಗೆ ಬೇಕಾದ ವ್ಯವಸ್ಥೆಗಳು ಇರುತ್ತದೆ. ನಾವು ಯಾವುದೇ ರೀತಿಯ ತೊಂದರೆಗೆ ಒಳಪಡುವುದಿಲ್ಲ. ಶಾಲೆಯ ರಜೆಯ ದಿನಗಳಲ್ಲಿ ಹೊರಗೆ ದುಡಿಯಲು ಹೋಗುವ ನಮ್ಮ ಮೇಲೆ ಶೋಷಣೆ ಮಾಡಿ ಹಿಡಿದುಕೊಂಡು ಹೋಗಿ ಹೊರದೇಶಕ್ಕೆ ಮಾರುವುದಿಲ್ಲ. ಇಂತಹ ತೊಂದರೆಗಳಿಂದ ಬಿಡುಗಡೆ ಇರುತ್ತದೆ.
- **<u>ಶಾಲೆಯಲ್ಲಿ ನಮ್ಮ ರಕ್ಷಣೆ:</u>** ತಪ್ಪು ಮಾಡಿರುವ ಮಕ್ಕಳಿಗೆ ಶಿಕ್ಷಕರು ಮಾನಸಿಕ ಹಿಂಸೆ ನೀಡುವುದಿಲ್ಲ. ಆ ತಪ್ಪನ್ನು ಪದೇ ಪದೇ ಚರ್ಚಿಸಿ ನಮಗೆ ಅವಮಾನ ಉಂಟಾಗುವಂತೆ ಮಾಡುವುದಿಲ್ಲ. ನಾವು ವ್ಯಕ್ತಪಡಿಸಿದ ಸಮಸ್ಯೆಗಳನ್ನು ಶಿಕ್ಷಕರು ನಿರ್ಲಕ್ಷಿಸುವುದಿಲ್ಲ. ಓದಿನಲ್ಲಿ ಉತ್ತಮವಾದ ಫಲಿತಾಂಶವನ್ನು ನೀಡುವ ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ನೀಡುವುದರ ಜೊತೆಗೆ ಉತ್ತಮ ಫಲಿತಾಂಶ ಬಾರದಿರುವ ಮಕ್ಕಳನ್ನು ಸಮಾನವಾಗಿ ಕಾಣುತ್ತಾರೆ. ಶಿಕ್ಷಕರಿಂದ ನಮಗೆ ಯಾವುದೇ ರೀತಿಯ ದೌರ್ಜನ್ಯ ಇರುವುದಿಲ್ಲ. ಶಿಕ್ಷಕರು ನಮ್ಮೊಂದಿಗೆ ಕ್ರೂರ ರೀತಿಯಿಂದ ನಡೆದುಕೊಳ್ಳುವುದಿಲ್ಲ. ಶಿಕ್ಷಕರು ಮಕ್ಕಳಿಗೆ ಬೇಕಾದಂತಹ ಸಲಹೆ ನೀಡುವಂತೆ ಇರುತ್ತದೆ. ನಮ್ಮ ಶಾಲೆಯ ಸುತ್ತಮುತ್ತಲಿನ ವಾತಾವರಣ ಕಲುಷಿತವಾಗಿರುವುದಿಲ್ಲ. ಯಾವುದೇ ರೋಗಗಳು ಉಂಟಾಗುವುದಿಲ್ಲ. ನಮ್ಮ ಆರೋಗ್ಯ ಚೆನ್ನಾಗಿರುತ್ತದೆ. ನಮ್ಮ ಶಾಲೆಗಳು ಊರಿನ ಒಳಗೆ ಇರುವುದರಿಂದ ಊರಿನ ವಾರಾವರಣವೂ ಸಹ ಸ್ವಚ್ಛವಾಗಿರುತ್ತದೆ. ಶಿಕ್ಷಕರ ಹಾಗು ವಿದ್ಯಾರ್ಥಿಗಳ ನಡುವೆ ಮಧುರವಾದ ಬಾಂಧವ್ಯ ಇರುತ್ತದೆ. ಅವರು ಪ್ರೀತಿ ಹಾಗು ವಿಶ್ವಾಸದಿಂದಿರುತ್ತಾರೆ. ಶಾಲೆಯಲ್ಲಿ ನಮ್ಮನ್ನು ಯಾರೂ ಕೆಳ ಜಾತಿ ಅಥವ ಮೇಲು ಜಾತಿ ಎಂದು ಹೇಳುವುದಿಲ್ಲ.
- **<u>ಸಮುದಾಯದಲ್ಲಿ ನಮ್ಮ ರಕ್ಷಣೆ:</u>** ನಮ್ಮ ರಕ್ಷಣೆಗಾಗಿ ಶೌಚಾಲಯ ಹಾಗು ಪೋಲೀಸ್ ಠಾಣೆ ಇರುತ್ತವೆ. ನಮ್ಮ ಊರಿನಲ್ಲಿರುವ ಕೆರೆಗೆ ತಂತಿ ಬೇಲಿ ಇರುತ್ತದೆ. ಹೆಣ್ಣು ಮಕ್ಕಳಿಗೆ ಹಾಗು ಗಂಡು ಮಕ್ಕಳಿಗೆ ರಕ್ಷಣೆ ಇರುತ್ತದೆ. ಹೆಣ್ಣು ಮಕ್ಕಳಿಗೆ ಎಲ್ಲರು ಗೌರವವನ್ನು ನೀಡುತ್ತಾರೆ. ಹೆಣ್ಣು ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆಯುವುದಿಲ್ಲ. ನಮ್ಮ ಕುಟುಂಬವು ಹೊಂದಾಣಿಕೆಯಿಂದ ಹಾಗು ಪರಸ್ಪರ ಪ್ರೀತಿಯಿಂದ ಇರುತ್ತದೆ. ಹಾಗು ಯಾವುದೇ ರೀತಿಯ ಅಸಮಾಧಾನ ತೋರುವುದಿಲ್ಲ. ಯಾವುದೇ

ರೀತಿಯ ಜಾತಿ ಬೇಧ ಭಾವ ಇರುವುದಿಲ್ಲ. ನಮ್ಮ ಊರು ಸ್ವಚ್ಛವಾಗಿದ್ದರೆ ಊರಿನ ಜನರೂ ಕೂಡ ಆರೋಗ್ಯವಾಗಿರುತ್ತಾರೆ. ಕೌಟುಂಬಿಕ ಸಮಸ್ಯೆ ಇರುವುದಿಲ್ಲ.



ಚಿತ್ರ 3: ಇಲ್ಲಿ ನಮ್ಮ ಊರಿನಲ್ಲಿ ನಮ್ಮ ರಕ್ಷಣೆಗೆ ಬೇಕಾದ ವ್ಯವಸ್ಥೆಗಳನ್ನು ಚಿತ್ರಿಸಿದ್ದೇವೆ

- **ಮದ್ಯಪಾನದಿಂದ ನಮಗೆ ರಕ್ಷಣೆ:** ನಮ್ಮ ಮನೆಯಲ್ಲಿ ಮದ್ಯಪಾನ ಮಾಡಿ ಗಲಾಟೆ ಮಾಡುವುದಿಲ್ಲ. ತಂದೆ ತಾಯಿ ಕುಡಿಯುವುದಿಲ್ಲ.
- **ಬಾಲ್ಯ ವಿವಾಹದಿಂದ ನಮಗೆ ರಕ್ಷಣೆ:** ನಮ್ಮ ಗ್ರಾಮವು ಬಾಲ್ಯ ವಿವಾಹ ಮುಕ್ತವಾಗಿರುತ್ತದೆ. ಕುಟುಂಬದಲ್ಲಿ ಬಾಲ್ಯ ವಿವಾಹ ಮಾಡುವುದಿಲ್ಲ.

## ನಮ್ಮ ವ್ಯವಸ್ಥೆಯ ಹಕ್ಕು:

- **ದುಡಿಯುವ ಸ್ಥಳದಲ್ಲಿ ನಮಗೆ ವ್ಯವಸ್ಥೆ**: ನಮ್ಮ ದುಡಿಮೆಯ ಕ್ಷೇತ್ರವು ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಇರುತ್ತದೆ. ನಮ್ಮ ಕೆಲಸ ಸುಲಭವಾಗಿ ನಿರ್ವಹಿಸಲು ನಮಗೆ ಸಹಕಾರ ದೊರೆಯುತ್ತದೆ. ಕೆಲವು ಕೆಲಸಗಳಿಗೆ ಅಗತ್ಯವಾಗಿ ಬೇಕಾದ ವಸ್ತುಗಳು ಕಡ್ಡಾಯವಾಗಿ ದೊರಕುತ್ತವೆ (ಉದಾಹರಣೆಗೆ: ಗಾರೆ ಕೆಲಸ ಮಾಡುವವರಿಗೆ ಕೈಕಾಲುಗಳಿಗೆ ಶೂಸ್ ಮತ್ತು ಗ್ಲೌಸ್ ಸಿಗುತ್ತದೆ). ನಿಗದಿತ ಸಮಯದಲ್ಲಿ ಉತ್ತಮವಾದ ಆಹಾರ ಹೊಟ್ಟೆ ತುಂಬುವಷ್ಟು ಸಿಗುತ್ತದೆ. ಕೆಲಸ ಮಾಡುವ ಪ್ರದೇಶದಲ್ಲಿ ಶೌಚಾಲಯ ಇರುತ್ತದೆ. ನಮಗೆ ಕೆಲಸ ಮಾಡುವ ಸಮಯದಲ್ಲಿ ವಿಶ್ರಾಂತಿ ಸಿಗುತ್ತದೆ.
- **ನಮಗೆ ವ್ಯವಸ್ಥೆ**: ನಮ್ಮ ಊರಿನಲ್ಲಿ ದುಡಿಯುವ ಮಕ್ಕಳಿಗೆ ವ್ಯವಸ್ಥೆ ಇರುತ್ತದೆ. ಕೆಲಸದ ಸಮಯದಲ್ಲಿ, ತುರ್ತು ಪರಿಸ್ಥಿತಿಯಲ್ಲಿ ಮತ್ತು ಸಭೆ ಸಮಾರಂಭವಿದ್ದಲ್ಲಿ ನಮಗೆ ಕಡ್ಡಾಯವಾಗಿ ಬಿಡುವು ಸಿಗುತ್ತದೆ. ಕಾನೂನಿನ ಪ್ರಕಾರ ನಿಗದಿತ ಸಮಯದವರೆಗೆ ಮಾತ್ರ ಕೆಲಸ ಮಾಡುವಂತೆ ಇರುತ್ತದೆ. ದೊಡ್ಡವರಂತೆ

ಸಮಾನವಾದ ವೇತನ ಸಿಗುತ್ತದೆ. ತಿಂಗಳಿನ ಕೊನೆಯಲ್ಲಿ ಪೂರ್ತಿ ಸಂಬಳ ಸಿಗುತ್ತದೆ. ವಾರದಲ್ಲಿ ಒಮ್ಮೆ ರಜೆ ಕಡ್ಡಾಯವಾಗಿ ಸಿಗುತ್ತದೆ. ನಮಗೆ ವೃತ್ತಿಪರ ಶಿಕ್ಷಣ ಸಿಗುತ್ತದೆ. ನಮಗೆ ಸಂಬಳ ಭೇದ ಭಾವ ಆಗುವುದಿಲ್ಲ. ನಮಗೆ ಸಂಬಳ ಹೆಚ್ಚು ಆಗುತ್ತದೆ. ನಮಗೆ ಹೊಲಿಗೆ ಉದ್ಯೋಗ ಸಿಗುತ್ತದೆ. ಹೆಣ್ಣು ಮಕ್ಕಳು ಹಾಗು ಗಂಡು ಮಕ್ಕಳಿಗೆ ನೀಡುವ ಸಂಬಳದಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲ. ಕುರಿಯನ್ನು ಕಾಯುವ ನಮ್ಮಲ್ಲಿ ಕೆಲವರಿಗೆ ಕಾಲುಗಳಿಗೆ ಚಪ್ಪಲಿ ಇರುತ್ತದೆ. ಮಳೆಗಾಲದಲ್ಲಿ ದುಡಿಯುವ ನಮಗೆ ಛತ್ರಿ ಇರುತ್ತದೆ. ಕೂಲಿ ಕೆಲಸ ಮಾಡುವ ನಾವು ನಮ್ಮ ಕಾಲಿನ ಮೇಲೆ ನಿಂತುಕೊಳ್ಳುವಂತೆ ವ್ಯವಸ್ಥೆ ಇರುತ್ತದೆ.

- **ನಮ್ಮ ಊರಿನಲ್ಲಿ ನಮಗೆ ವ್ಯವಸ್ಥೆ:** ನಮ್ಮ ಊರಿನಲ್ಲಿ ಅಂಚೆ ಕಛೇರಿ, ಶಾಲೆ, ಆಸ್ಪತ್ರೆ ಹಾಗು ಸರಿಯಾದ ರಸ್ತೆಗಳು ಇರುತ್ತವೆ. ನಮ್ಮ ಮನೆಯ ಹೊರಗೆ ಕುಡಿಯುವ ನೀರಿನ ನಲ್ಲಿಯ ವ್ಯವಸ್ಥೆ ಹಾಗು ಕೊಳವೆ ಬಾವಿಯ ವ್ಯವಸ್ಥೆ ಇರುತ್ತದೆ. ನಮ್ಮ ಊರಿನಲ್ಲಿ ಬಸ್ ನಿಲ್ದಾಣ ಇರುತ್ತದೆ. ನಮ್ಮ ಊರಿನಲ್ಲಿ ಸಿಮೆಂಟ್ ರಸ್ತೆಗಳು ಇರುತ್ತವೆ. ನಮ್ಮ ಹಳ್ಳಿ ಸ್ವಚ್ಛವಾಗಿರುತ್ತದೆ. ನಮ್ಮ ಹಳ್ಳಿಯಲ್ಲಿ ನೀರಿನ ಸಮಸ್ಯೆ ಇರುವುದಿಲ್ಲ. ನಮ್ಮ ಹಳ್ಳಿಯಲ್ಲಿ ಆರೋಗ್ಯ ಇಲಾಖೆ ಇರುತ್ತದೆ. ಸಾರಿಗೆ ವ್ಯವಸ್ಥೆ ಇರುತ್ತದೆ. ವಯಸ್ಸಾದವರಿಗೆ ಸಹಾಯವು ಸಿಗುವಂತಹ ವ್ಯವಸ್ಥೆ ಇರುತ್ತದೆ. ನಮ್ಮ ಊರು ಸ್ವಚ್ಛವಾಗಿರುತ್ತದೆ. ನಮ್ಮ ಊರಿನಲ್ಲಿ ಸ್ಮಶಾಣ ಇರುತ್ತದೆ. ನಮ್ಮ ಊರಿನಲ್ಲಿ ಕಾಂಕ್ರೀಟ್ ಮನೆಗಳು ಇರುತ್ತವೆ. ನಮ್ಮ ಊರಿನಲ್ಲಿ ಜಾತ್ರೆ ನಡೆಯಬೇಕೆಂಬುದು ನಮ್ಮ ಕನಸು. ನಮ್ಮ ಊರಿನಲ್ಲಿ ಅಂಗವಿಕಲ ಮಕ್ಕಳಿಗೆ ವ್ಯವಸ್ಥೆ ಇರುತ್ತದೆ. ಪೋಷಕರು ನಿರುದ್ಯೋಗ ಹೊಂದುವಂತೆ ಇರುವುದಿಲ್ಲ. ಎಲ್ಲಾ ಮನೆಯಲ್ಲಿ ವಿದ್ಯುತ್ ಬಳಸುತ್ತಾರೆ. ಮನೆಯ ಸುತ್ತಮುತ್ತಲು ಗಿಡಮರಗಳು ಇರುತ್ತದೆ. ನಮ್ಮ ಸುತ್ತಮುತ್ತಲಿನ ವಾತಾವರಣ ಸ್ವಚ್ಛವಾಗಿರುತ್ತದೆ. ಜಾತಿ ಭೇದ ಭಾವ ಇರುವುದಿಲ್ಲ. ಕುಟುಂಬದಲ್ಲಿ ಎಲ್ಲಾ ಮಕ್ಕಳಿಗೆ ಶಿಕ್ಷಣ ಸಿಗುತ್ತದೆ. ನಮ್ಮ ಪ್ರದೇಶದಲ್ಲಿರುವ ಎಲ್ಲರಿಗೂ ಒಂದು ಸುಭದ್ರವಾದ ಮನೆಯು ಇರುತ್ತದೆ. ಮನೆಗಳಲ್ಲಿ ಶೌಚಾಲಯ ಇರುತ್ತದೆ. ಹೀಗೆ ನಾವು ಬಯಲಿಗೆ ಹೋಗದೆ ಗೌರವದಿಂದ ಮನೆಯಲ್ಲಿ ಶೌಚ ಮಾಡುತ್ತೇವೆ. ನಮಗೆ ಯಾವುದೇ ಸಮಸ್ಯೆ ಇಲ್ಲದೆ ಓದಲು ಮನೆಯಲ್ಲಿ ವಿದ್ಯುತ್ ಇರುತ್ತದೆ. ನಮ್ಮ ಮನೆಯಲ್ಲಿರುವ ನಲ್ಲಿಗಳಲ್ಲಿ ಶುದ್ಧವಾದ ನೀರು ಬರುತ್ತದೆ. ನಮ್ಮ ಊರಿನಲ್ಲಿ ಕಸವನ್ನು ತೆಗೆದುಹಾಕಲು ಒಳ್ಳೆಯ ವ್ಯವಸ್ಥೆ ಇದೆ. ನಮ್ಮ ಮನೆಯ ಮುಂದೆ ಒಂದು ಒಳ್ಳೆಯ ಉದ್ಯಾನವನ ಇರುತ್ತದೆ.



ಚಿತ್ರ 4: ನಮ್ಮ ಊರಿನಲ್ಲಿ ಇರಬೇಕಾದ ವ್ಯವಸ್ಥೆಗಳನ್ನು ಇಲ್ಲಿ ಚಿತ್ರಿಸಿದ್ದೇವೆ

- **ಶಾಲೆಯಲ್ಲಿ ನಮಗೆ ವ್ಯವಸ್ಥೆ:** ನಮ್ಮ ಶಾಲೆಯು ಒಂದು ದೊಡ್ಡ ಕಟ್ಟಡವಾಗಿದ್ದು ಅದರಲ್ಲಿ ತರಗತಿಗಳು, ಪ್ರತ್ಯೇಕವಾದ ಪಾಕಶಾಲೆ ಇರುತ್ತವೆ. ಶಾಲೆಯ ಸುತ್ತಮುತ್ತಲು ಗಿಡಮರಗಳು ಹಾಗು ಹೂಗಿಡಗಳು, ದಿನನಿತ್ಯ ಸೇವಿಸುವ ತರಕಾರಿಯನ್ನು ಬೆಳೆಸಬಹುದಾದಂತಹ ಅಡಿಗೆ ಉದ್ಯಾನ ಇರುತ್ತವೆ. ಒಂದು ಬಾವಿ, ಕಸದ ಬುಟ್ಟಿ, ಶೌಚಾಲಯ ಹಾಗು ಕೈ ತೊಳೆಯುವ ಸ್ಥಳ ಇರುತ್ತವೆ. ಉಯ್ಯಾಲೆ ಹಾಗು ಜಾರುಬಂಡೆ ಇರುವಂತಹ ಆಟದ ಮೈದಾನ ಇದ್ದು, ಅದರಲ್ಲಿ ಒಂದು ಕಬ್ಬಡ್ಡಿ ಅಂಗಣ ಇರುತ್ತದೆ. ನಮ್ಮ ರಕ್ಷಣೆಗಾಗಿ ಒಂದು ಕಾಂಪೌಂಡ್ ಗೋಡೆಯು ಇರುತ್ತದೆ. ನಮ್ಮ ಶಾಲೆಯಲ್ಲಿ ಮುರಿದಿರುವ ಕಿಟಕಿ ಬಾಗಿಲು ಮತ್ತು ಹಳೆಯ ಕಟ್ಟಡಗಳು ಹಾಗು ಕೊಠಡಿಗಳು ಇರುವುದಿಲ್ಲ. ಶಾಲೆಯು ಶಿಕ್ಷಣಕ್ಕೆ ಮಾತ್ರವಲ್ಲದೇ ಪಠ್ಯೇತರ ಚಟುವಟಿಕೆಗಳಿಗೂ ಕೂಡ ಒತ್ತು ನೀಡುತ್ತದೆ. ಶಾಲೆಯಲ್ಲಿ ಶನಿವಾರ ದಿನದಂದು ಬಿರಿಯಾನಿಯಂತಹ ಪೌಷ್ಟಿಕ ಆಹಾರ ದೊರೆಯುತ್ತದೆ. ಶಿಕ್ಷಕರು ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲವನ್ನು ತಿಳಿದುಕೊಂಡಿರುತ್ತಾರೆ. ನಮ್ಮ ಶಾಲೆಯಲ್ಲಿ ಊಟದ ವ್ಯವಸ್ಥೆ ಇರುತ್ತದೆ. ನಮ್ಮ ಊರಿನ ಶಾಲೆಯ ವಾತಾವರಣ ಸ್ವಚ್ಛವಾಗಿರುತ್ತದೆ. ಶಾಲೆಯಲ್ಲಿ ಮಾಡುವ ಅಡುಗೆ ಸ್ವಚ್ಛವಾಗಿರುತ್ತದೆ ಹಾಗು ಸಮತೋಲಿತ ಆಹಾರವಾಗಿರುತ್ತದೆ. ಶಾಲೆಯಲ್ಲಿ ನಮಗೆ ಬೇಕಾದಂತಹ ಸೌಲಭ್ಯ ಇರುತ್ತದೆ: ಕಂಪ್ಯೂಟರ್, ಶೌಚಾಲಯ, ನೀರು, ಅಡುಗೆ ಹಾಗು ಇತರ ವ್ಯವಸ್ಥೆಗಳನ್ನು ಹೊಂದಿರುತ್ತದೆ. ನಾವು ಶಾಲೆಗೆ ಬರುವ ಮೊದಲೇ ಶಿಕ್ಷಕರು ಶಾಲೆಯಲ್ಲಿರುತ್ತಾರೆ. ಶಾಲೆಯಲ್ಲಿ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತೆ ಬೋಧಿಸಲು ಎಲ್ಲಾ

ವಿಷಯದ ಶಿಕ್ಷಕರು ಇರುತ್ತಾರೆ. ನಮ್ಮ ಶಾಲೆಯಲ್ಲಿ ನಮ್ಮ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಬಗೆಹರಿಸುವ ಸಾಮರ್ಥ್ಯವನ್ನು ಶಿಕ್ಷಕರು ಹೊಂದಿರುತ್ತಾರೆ. ನಮ್ಮ ಶಾಲೆಯ ಸುತ್ತಮುತ್ತಲಿನ ವಾತಾವರಣ ಕಲುಷಿತವಾಗಿರುವುದಿಲ್ಲ. ನಮ್ಮ ಊರು ಸ್ವಚ್ಛವಾಗಿದ್ದರೆ ಊರಿಗ ಜನರೂ ಕೂಡ ಆರೋಗ್ಯವಾಗಿರುತ್ತಾರೆ. ಆಟವನ್ನು ಆಡಲು ಒಳ್ಳೆಯ ಸ್ಥಳ ಇದೆ. ನಮಗೆ ಶಾಲೆಗಳಿಗೆ ಹೋಗಲು ವಾಹನಗಳು ಇರುತ್ತದೆ. ನಮ್ಮ ಶಾಲೆಯ ಸುತ್ತಮುತ್ತಲಿನ ವಾತಾವರಣವು ಚೆನ್ನಾಗಿರುತ್ತದೆ. ನಾವು ಆಟವಾಡುವಾಗ ಶಿಕ್ಷಕರು ಸೇರಿಕೊಳ್ಳುತ್ತಾರೆ.



ಚಿತ್ರ 4: ನಮ್ಮ ಶಾಲೆಯಲ್ಲಿ ಇರಬೇಕಾದ ವ್ಯವಸ್ಥೆಗಳನ್ನು ಇಲ್ಲಿ ಚಿತ್ರಿಸಿದ್ದೇವೆ

- **<u>ಆರೋಗ್ಯಕ್ಕೆ ಸಂಬಂಧಿಸಿದಂತೆ ನಮಗೆ ವ್ಯವಸ್ಥೆ:</u>** ಸಣ್ಣ ಮಕ್ಕಳಿಗೆ ಸರಿಯಾದ ವಯಸ್ಸಿನಲ್ಲಿ ಪೋಲಿಯೋ ಲಸಿಕೆ ದೊರೆಯುತ್ತದೆ. ಕುಟುಂಬದ ಸದಸ್ಯರೆಲ್ಲಾ ಶುದ್ಧ ನೀರನ್ನು ಸೇವಿಸುತ್ತಾರೆ. ನಮ್ಮ ಕುಟುಂಬದಲ್ಲಿ ಎಲ್ಲರೂ ಆರೋಗ್ಯವಾಗಿರುತ್ತಾರೆ.
- **<u>ನಮಗೆ ಶಿಕ್ಷಣದ ವ್ಯವಸ್ಥೆ:</u>** ಎಲ್ಲಾ ಮಕ್ಕಳು ಶಿಕ್ಷಣವನ್ನು ಮುಂದುವರಿಸಲು ಸ್ಥಳೀಯವಾಗಿ ಕಾಲೇಜು ಇರುತ್ತದೆ. ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರೆಯುತ್ತದೆ. ನಮ್ಮ ಊರಿನಲ್ಲಿ ನಮಗೆ ಶಾಲೆಯು ಇರುತ್ತದೆ. ನಮಗೆ ಸಾವಯವ ತರಬೇತಿ ಸಿಗುತ್ತದೆ. ನಾವು ಶಿಕ್ಷಣವನ್ನು ಪೂರ್ಣಗೊಳಿಸಿ ಉದ್ಯೋಗವನ್ನು ಪಡೆದುಕೊಂಡು ಪೋಷಕರನ್ನು ಸಂತೋಷ ಪಡಿಸುತ್ತೇವೆ.
- **<u>ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ನಮಗೆ ವ್ಯವಸ್ಥೆ:</u>** ನಮ್ಮ ಹಳ್ಳಿಯಲ್ಲಿ ಅಕ್ರಮ ಮದ್ಯ ಮಾರಾಟ ಇರುವುದಿಲ್ಲ.

## ನಮ್ಮ ಭಾಗವಹಿಸುವಿಕೆಯ ಹಕ್ಕು:

- **ನಮಗೆ ಭಾಗವಹಿಸಲು ವೇದಿಕೆಗಳು**: ನಮ್ಮ ಊರಿನಲ್ಲಿ ಗ್ರಾಮ ಪಂಚಾಯತ್ ಇದ್ದು, ಅದರಲ್ಲಿ ಮಕ್ಕಳ ಗ್ರಾಮ ಸಭೆಯು ನಿಯಮಿತವಾಗಿ ನಡೆಯುವುದು ಹಾಗು ಅಲ್ಲಿ ಮಕ್ಕಳ ಸಂಘ ಇರುವುದು. ನಮಗೆ ನಮ್ಮ ಭಾಗವಹಿಸುವಿಕೆಯ ಹಕ್ಕನ್ನು ಚಲಾಯಿಸಲು ಹೆಚ್ಚಿನ ವೇದಿಕೆಗಳು ಇರುತ್ತವೆ. ಯಾವುದೇ ಕಾರ್ಯಕ್ರಮವಿದ್ದರೆ ನಮಗೆ ಪ್ರೋತ್ಸಾಹ ದೊರೆಯುತ್ತದೆ. ಜಾತಿ ಬೇಧ ಇರುವುದಿಲ್ಲ. ಹೆಣ್ಣು ಮಕ್ಕಳು ಹಾಗು ಗಂಡು ಮಕ್ಕಳು ಒಗ್ಗಟ್ಟಿನಿಂದ ಇರುತ್ತಾರೆ ಹಾಗು ಅವರಲ್ಲಿ ಬೇಧ ಭಾವ ಇರುವುದಿಲ್ಲ.
- **ನಮ್ಮ ಸಮಸ್ಯೆಯನ್ನು ವ್ಯಕ್ತಪಡಿಸಲು ವ್ಯವಸ್ಥೆಗಳು**: ನಮಗೆ ಎಲ್ಲಾ ರೀತಿಯ ಹಕ್ಕುಗಳು ಇರುತ್ತವೆ. ನಮ್ಮ ಸಮಸ್ಯೆಗಳನ್ನು ಸೂಚಿಸಲು ಹಾಗು ಪರಿಹಾರವಾದ ಸಮಸ್ಯೆಗಳನ್ನು ಗುರುತಿಸಲು ಕೆಂಪು ಪಟ್ಟಿ ಬಿಳಿ ಪಟ್ಟಿ ಪ್ರಕ್ರಿಯೆ ಹಾಗು ಮಕ್ಕಳ ಅಂಚೆ ಪೆಟ್ಟಿಗೆ ವ್ಯವಸ್ಥೆ ಇರುತ್ತದೆ.

**ದಯವಿಟ್ಟು ಗಮನಿಸಿ:** ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ ನಮ್ಮ ಹೆಸರುಗಳು ಹಾಗು ಕೆಲಸದ ವಿವರಗಳು (ಅನುಬಂಧ 1), ಹಾಗು 2018 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ವಿಧಾನ ಸಭೆ ಚುನಾವಣೆಯ ಅಂಗವಾಗಿ ನೀಡಿರುವ ಪ್ರಣಾಳಿಕೆಯನ್ನು (ಅನುಬಂಧ 2) ನಾವು ಈ ಪ್ರಣಾಳಿಕೆಯೊಂದಿಗೆ ಸೇರಿಸುತ್ತಿದ್ದೇವೆ.

## ಅನುಬಂಧ 1: ಈ ಪ್ರಣಾಳಿಕೆಯನ್ನು ತಯಾರಿಸಿದ ಮಕ್ಕಳ ಕುರಿತ ಮಾಹಿತಿ:

| ಕ್ರ. ಸಂ | ಹೆಸರು | ಸ್ಥಳ | ಜಿಲ್ಲೆ | ದುಡಿಮೆ / ವೃತ್ತಿಪರ ತರಬೇತಿಯ ಕುರಿತ ಮಾಹಿತಿ |
|---|---|---|---|---|
| 1 | ಸ್ವಾತಿ | ಸಿದ್ದಾಪುರ | ಉಡುಪಿ | ಎಸ್. ಎಲ್. ಆರ್. ಎಂ ಘಟಕದಲ್ಲಿ ಕೆಲಸ |
| 2 | ಅರ್ಜುನ್ | ಹಟ್ಟಿಯಂಗಡಿ ಕ್ರಾಸ್ | ಉಡುಪಿ | ಗಾರೆ ಕೆಲಸ ಮತ್ತು ಶಾಲೆಗೆ ಹೋಗುತ್ತಿರುವುದು |
| 3 | ದೀಪಕ್ | ಹಟ್ಟಿಯಂಗಡಿ ಕ್ರಾಸ್ | ಉಡುಪಿ | ಗಾರೆ ಕೆಲಸ ಮತ್ತು ಶಾಲೆಗೆ ಹೋಗುತ್ತಿರುವುದು |
| 4 | ವಿನುತ ಎಚ್ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 5 | ವಿನುತ ಕೆ ವಿ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 6 | ಅನುಶ ಸಿ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 7 | ಶಶಿಕಲ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 8 | ರೋಸ್‌ಮೆರಿ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 9 | ಲಕ್ಷ್ಮಿ | ಹಟ್ಟಿಯಂಗಡಿ ಕ್ರಾಸ್ | ಉಡುಪಿ | ದುಡಿಮೆ ಮತ್ತು ಶಾಲೆಗೆ ಹೋಗುತ್ತಿರುವುದು |
| 10 | ಅನಿತ | ಹಟ್ಟಿಯಂಗಡಿ ಕ್ರಾಸ್ | ಉಡುಪಿ | ದುಡಿಮೆ ಮತ್ತು ಶಾಲೆಗೆ ಹೋಗುತ್ತಿರುವುದು |
| 11 | ಸರೋಜ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 12 | ಲಾವಣ್ಯ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 13 | ಸುವರ್ಣ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 14 | ರಶ್ಮಿ ಕೆ ಎ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 15 | ಭವಾನಿ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 16 | ನಾಗರಾಜ್ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 17 | ದಿವಾಕರ್ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 18 | ಶ್ರೀವತ್ಸ | ನಮ್ಮ ಭೂಮಿ | ಉಡುಪಿ | ವೃತ್ತಿಪರ ತರಬೇತಿ |
| 19 | ರೂಪ | ಕುಂದಾಪುರ | ಉಡುಪಿ | ದುಡಿಮೆ |
| 20 | ದುರ್ಗೇಶ್ | ಬಹದ್ದೂರ್ ಸಂಘ | ಉಡುಪಿ | ದುಡಿಮೆ |
| 21 | ಹೊನ್ನಮ್ಮ | ಹೊನ್ನೂರು | ಬಳ್ಳಾರಿ | ರಾಟೆ |
| 22 | ವಿಶಾಲ | ಹೊನ್ನೂರು | ಬಳ್ಳಾರಿ | ರಾಟೆ, ಗದ್ದೆ ಕೆಲಸ |
| 23 | ಚೈತ್ರ | ಹೊನ್ನೂರು | ಬಳ್ಳಾರಿ | ರಾಟೆ, ಗದ್ದೆ ಕೆಲಸ |
| 24 | ಪವಿತ್ರ | ಹೊನ್ನೂರು | ಬಳ್ಳಾರಿ | ಮಲ್ಲಿಗೆ ಮೊಗ್ಗು ಕೀಳುವುದು, ಗದ್ದೆ ಕೆಲಸ |
| 25 | ದುರ್ಗಮ್ಮ | ಹೊನ್ನೂರು | ಬಳ್ಳಾರಿ | ಕೂಲಿ ಕೆಲಸ, ರಾಟೆ |
| 26 | ಕಾವೇರಿ | ಹೊನ್ನೂರು | ಬಳ್ಳಾರಿ | ಗದ್ದೆ ಕೆಲಸ |
| 27 | ಕಿರಣ್ | ಹೊನ್ನೂರು | ಬಳ್ಳಾರಿ | ಗದ್ದೆ ಕೆಲಸ |

| | | | | |
|---|---|---|---|---|
| 28 | ಶಿವಣ್ಣ | ಹೊನ್ನೂರು | ಬಳ್ಳಾರಿ | ಕೆರೆಯ ಬಳಿ ಮರಳು ತುಂಬುವುದು |
| 29 | ಸೌಂದರ್ಯ | ಹೊನ್ನೂರು | ಬಳ್ಳಾರಿ | ಮಲ್ಲಿಗೆ ಮೊಗ್ಗು ಕೀಳುವುದು, ಗದ್ದೆ ಕೆಲಸ |
| 30 | ಮಾನಸ | ಹೊನ್ನೂರು | ಬಳ್ಳಾರಿ | ಮಲ್ಲಿಗೆ ಮೊಗ್ಗು ಕೀಳುವುದು, ಗದ್ದೆ ಕೆಲಸ |
| 31 | ಐಶ್ವರ್ಯ | ಹೊನ್ನೂರು | ಬಳ್ಳಾರಿ | ಮಲ್ಲಿಗೆ ಮೊಗ್ಗು ಕೀಳುವುದು, ಗದ್ದೆ ಕೆಲಸ |
| 32 | ಹನುಮಂತ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 33 | ಲಕ್ಷ್ಮೀ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 34 | ಜ್ಯೋತಿ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 35 | ಶರಣಮ್ಮ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 36 | ಜ್ಯೋತಿ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 37 | ಕೃಷ್ಣ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 38 | ಅನಿಲ್ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 39 | ಋತ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 40 | ಮುನೇಶ್ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 41 | ಭೀಮಣ್ಣ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 42 | ಕಸ್ತೂರಿ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 43 | ಅಭಿ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 44 | ವೇದ | ಆದಿ ಉಡುಪಿ | ಉಡುಪಿ | ಮೀನುಗಾರಿಕೆ |
| 45 | ಭಾರತಿ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 46 | ವೈಷ್ಣವಿ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 47 | ಜ್ಯೋತಿ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 48 | ಹನುಮಂತ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 49 | ಭೀಮವ್ವ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 50 | ವಿದ್ಯಾ | ಬೀಡಿನಗುಡ್ಡೆ | ಉಡುಪಿ | ಮನೆಕೆಲಸ |
| 51 | ಭೀಮವ್ವ | ಹಿರೇಮಲನಕೇರಿ | ಬಳ್ಳಾರಿ | ಕೃಷಿಕೂಲಿ |
| 52 | ಗಂಗಮ್ಮ | ಹಿರೇಮಲನಕೇರಿ | ಬಳ್ಳಾರಿ | ಕೃಷಿಕೂಲಿ |
| 53 | ಸುಶ್ಮ | ಹಿರೇಮಲನಕೇರಿ | ಬಳ್ಳಾರಿ | ಕೃಷಿಕೂಲಿ |
| 54 | ಪ್ರಿಯಾಂಕ | ಹಿರೇಮಲನಕೇರಿ | ಬಳ್ಳಾರಿ | ಕೃಷಿಕೂಲಿ |
| 55 | ಪಿ. ಗೀತ | ಹಿರೇಮಲನಕೇರಿ | ಬಳ್ಳಾರಿ | ಕೃಷಿಕೂಲಿ |
| 56 | ಗಂಗಮ್ಮ | ಹಿರೇಮಲನಕೇರಿ | ಬಳ್ಳಾರಿ | ಹೊಲಿಗೆ |
| 57 | ಕೆ. ಪವಿತ್ರ | ಹಿರೇಮಲನಕೇರಿ | ಬಳ್ಳಾರಿ | ಮನೆಕೆಲಸ |
| 58 | ಜ್ಯೋತಿ | ಹಿರೇಮಲನಕೇರಿ | ಬಳ್ಳಾರಿ | ಹೊಲಿಗೆ |
| 59 | ಮಲ್ಲಮ್ಮ | ಹಿರೇಮಲನಕೇರಿ | ಬಳ್ಳಾರಿ | ಮನೆಕೆಲಸ |

| | | | | |
|---|---|---|---|---|
| 60 | ಮಾರುತಿ | ಹಿರೇಮಲನಕೇರಿ | ಬಳ್ಳಾರಿ | ಕೂಲಿ ಕೆಲಸ |
| 61 | ಪಿ. ಫಾತಿಮಾ | ನಂದಿಹಳ್ಳಿ | ಬಳ್ಳಾರಿ | ಬಟ್ಟೆ ಅಂಗಡಿಯಲ್ಲಿ ಕೆಲಸ |
| 62 | ವಿ. ಬಿ. ಅನ್ನಪೂರ್ಣ | ನಂದಿಹಳ್ಳಿ | ಬಳ್ಳಾರಿ | ಕಂಪ್ಯೂಟರ್ ಅಂಗಡಿಯಲ್ಲಿ ಕೆಲಸ |
| 63 | ಸಂಗೀತ | ನಂದಿಹಳ್ಳಿ | ಬಳ್ಳಾರಿ | ತರಬೇತಿ |
| 64 | ಯಲ್ಲಮ್ಮ | ನಂದಿಹಳಿ | ಬಳ್ಳಾರಿ | ಕೃಷಿಕೂಲಿ |
| 65 | ಶೇಖನ್ ಬಿ | ನಂದಿಹಳಿ | ಬಳ್ಳಾರಿ | ಮನೆಕೆಲಸ |
| 66 | ಪಿ. ರೇಶ್ಮ | ನಂದಿಹಳ್ಳಿ | ಬಳ್ಳಾರಿ | ಮನೆಕೆಲಸ |

**ಅನುಬಂಧ 2: 2018 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ವಿಧಾನ ಸಭೆ ಚುನಾವಣೆಯ ಅಂಗವಾಗಿ ನೀಡಿರುವ ಪ್ರಣಾಳಿಕೆ**

**ರಿಗೆ,**

**ಮಾನ್ಯ ಮುಖ್ಯ ಮಂತ್ರಿಗಳು**

**ಕರ್ನಾಟಕ ಸರ್ಕಾರ**

**ವಿದಾನ ಸಭಾ ಬೆಂಗಳೂರು**

**ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮಕ್ಕಳ ಪರವಾಗಿ 'ಮಕ್ಕಳ ಹಕ್ಕುಗಳ ಬಗೆಗಿನ ನಿಮ್ಮ ಬದ್ಧತೆ ಪ್ರಾಮಾಣಿಕವಾಗಿ ಕಾರ್ಯಕತಗೊಳಿಸಬೇಕೆಂದು ನಮ್ಮ ಕೋರಿಕೆ'**

ಮಕ್ಕಳ ಹಕ್ಕುಗಳ ಬಗೆಗಿನ ತಮ್ಮ **ಸರ್ಕಾರದ** ಬದ್ಧತೆಯನ್ನು ಸ್ಪಷ್ಟವಾಗಿ ಪ್ರತಿಭಿಂಬಿಸಬೇಕೆಂದು ಈ ರಾಜ್ಯದ ಪ್ರಜೆಗಳಾದ ಮಕ್ಕಳು (ನಾವು) ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳನ್ನು ಒತ್ತಾಯಿಸಿದ್ದೇವೆ. ಈ ಕೆಳಗೆ ತಿಳಿಸಿದ ಅಂಶಗಳನ್ನು ಅನುಷ್ಠಾನಗೊಳಿಸಿ ರಾಜ್ಯದ ಎಲ್ಲಾ ಮಕ್ಕಳಿಗೆ, ನಮ್ಮ ಹಕ್ಕುಗಳನ್ನು ಚಲಾಯಿಸಲು ಅಗತ್ಯವಾದ ವಾತಾವರಣ ಹಾಗು ಅನುಕೂಲಗಳನ್ನು ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಮ್ಮನ್ನು ಈ ಮೂಲಕ ಒತ್ತಾಯಿಸುತ್ತಿದ್ದೇವೆ.

**ಮಕ್ಕಳ ಭಾಗವಹಿಸುವ ಹಕ್ಕು.**

ಸ್ಥಳೀಯ ಮಟ್ಟದಿಂದ ರಾಜ್ಯ ಮಟ್ಟದವರೆಗೆ ನಮ್ಮ ಬಗ್ಗೆ ತೀರ್ಮಾನವಾಗುವ ಎಲ್ಲಾ ಕಡೆ ಭಾಗವಹಿಸಲು ಅಗತ್ಯವಾದ ವ್ಯವಸ್ಥೆಗಳನ್ನು ಮಾಡಿಕೊಡುವಂತೆ ಮಾನ್ಯ ಮುಖ್ಯಮಂತ್ರಿಗಳು ಕ್ರಮಕೈಗೊಳ್ಳಬೇಕು.

- ಸ್ಥಳೀಯ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಮಕ್ಕಳ ಕುರಿತು ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೊದಲು, ಮಕ್ಕಳ ಪ್ರತಿನಿಧಿಗಳು, ಅವರ ಸಂಘಟನೆಗಳು ಹಾಗೂ ಮಕ್ಕಳೊಂದಿಗೆ ಕೆಲಸ ಮಾಡುವ ಸಂಘ ಸಂಸ್ಥೆಗಳ ಜೊತೆ ಚರ್ಚಿಸಲು ಅಗತ್ಯವಾದ ಅವಕಾಶಗಳನ್ನು, ವ್ಯವಸ್ಥೆಯನ್ನು ಎಲ್ಲಾ ಹಂತದ ಸರ್ಕಾರಗಳಲ್ಲಿ ರಚನೆಯಾಗಬೇಕು.

- ಮಕ್ಕಳೊಂದಿಗೆ ಚರ್ಚೆಯನ್ನು ಏರ್ಪಡಿಸುವ ಮೊದಲು ಅವರೊಂದಿಗೆ ಚರ್ಚಿಸಲು ಇರುವ ವಿಷಯವನ್ನು ಎಲ್ಲಾ ಮಕ್ಕಳಿಗೆ ಹಾಗೂ ಅವರೊಂದಿಗೆ ಕೆಲಸ ಮಾಡುವ ಹಾಗೂ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಹಿರಿಯರಿಗೆ ಸಾಕಷ್ಟು ಮುಂಚಿತವಾಗಿ ತಲುಪಿಸಲು ಅಗತ್ಯವಾದ ವ್ಯಾಪಕವಾದ ಪ್ರಚಾರಕ್ಕೆ ವ್ಯವಸ್ಥೆ ಮಾಡಬೇಕು.
- ಈಗಾಗಲೇ ಇರುವ ಮಕ್ಕಳ ಸಂಘಟನೆಗಳಿಗೆ ಸಲ್ಲ ಬೇಕಾದ ಗೌರವವನ್ನು ನೀವು ಕೊಡಬೇಕು. ಮಕ್ಕಳ ಬಗ್ಗೆ ತೀರ್ಮಾನವಾಗಬೇಕಾದ ವಿಷಯಗಳ ಬಗ್ಗೆ ಮಕ್ಕಳೊಂದಿಗೆ ಚರ್ಚೆ ಮಾಡಬೇಕಾದ ಸಂದರ್ಭದಲ್ಲಿ ಈ ಎಲ್ಲಾ ಮಕ್ಕಳ ಸಂಘಟನೆಗಳ ಪ್ರತಿನಿಧಿಗಳು ಅಂತಹ ಚರ್ಚೆಯಲ್ಲಿ ಭಾಗವಹಿಸಲು ಆಹ್ವಾನವನ್ನು ನೀಡಲು ಕ್ರಮ ಕೈಗೊಳ್ಳಬೇಕು. ರಾಜ್ಯ ವಿವಿದೆಡೆ ಈಗಾಗಾಲೇ ಹಲವು ಮಕ್ಕಳ ಸಂಘಟನೆಗಳು ಇವೆ.
- ಸ್ಥಳೀಯ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಯೋಜನೆ ಹಾಗೂ ಬಜೆಟ್ ತಯಾರಿಸುವಾಗ ಮಕ್ಕಳು, ಅವರ ಸಂಘಟನೆಗಳು, ಎತ್ತುವ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಿ, ಮಕ್ಕಳು ಎತ್ತಿದ ಸಮಸ್ಯೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಮಕ್ಕಳಿಗೆ ವಾಪಾಸ್ ವರದಿ ಮಾಡುವ ಬಗ್ಗೆ ಸಹ ಕ್ರಮಕೈಗೊಳ್ಳಬೇಕು
- **'ಮಕ್ಕಳು ಇಂದೇ ಪ್ರಜೆಗಳು'** ಎಂಬುದನ್ನು ಕರ್ನಾಟಕ ರಾಜ್ಯ ಸಕಾರ ಈಗಾಗಲೇ ಒಪ್ಪಿದೆ. ಇದಕ್ಕೆ ತಾವು ಇನ್ನೂ ಹೆಚ್ಚು ಪ್ರಚಾರವನ್ನು ಕೊಡಬೇಕು. ಪ್ರಜೆಗಳಾಗಿ ನಮಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ನಮ್ಮ ನಮ್ಮ ಗ್ರಾಮ ಪಂಚಾಯತ್/ನಗರ ಸ್ಥಳೀಯಾಡಳಿತ ಸರ್ಕಾರಗಳ ಜನಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಲು ಅನುಕೂಲವಾಗುವ ಹಾಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳು/ನಗರ ಸ್ಥಳೀಯಾಡಳಿತ ಸರ್ಕಾರಗಳು, ವರ್ಷಕ್ಕೆ ಎರಡು ಬಾರಿ ಮಕ್ಕಳ ಗ್ರಾಮಸಭೆಯನ್ನು ನಡೆಸುವ ವ್ಯವಸ್ಥೆಯನ್ನು ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತ್‌ಗಳು ಮಕ್ಕಳ ಗ್ರಾಮಸಭೆಗಳನ್ನು ನಡೆಸುವಂತೆ ರಾಷ್ಟ್ರದಲ್ಲೇ ಮೊದಲ ಬಾರಿಗೆ, ಕರ್ನಾಟಕ ಸರ್ಕಾರ ಈಗಾಗಲೇ ಸುತ್ತೋಲೆಯನ್ನು ಹೊರಡಿಸಿದೆ. ಅದೇ ರೀತಿ ರಾಜ್ಯದ ಎಲ್ಲಾ ನಗರ ಪಟ್ಟಣಗಳ ಪ್ರದೇಶದಲ್ಲಿರುವ ನಮಗೆ ಸ್ಥಳೀಯ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಯಾವುದೇ ವ್ಯವಸ್ಥೆಗಳು ಇಲ್ಲ ಎಂಬುದನ್ನು ಪಟ್ಟಣ, ನಗರ ಪ್ರದೇಶದಲ್ಲೂ ಸಹ ನಾವು ನಮ್ಮ ಪ್ರದೇಶದ ಜನ ಪ್ರತಿನಿಧಿಗಳ ಜೊತೆ ನಿರಂತರ ಮಾತುಕತೆ ನಡೆಸಲು ಸೂಕ್ತವಾದ ವೇದಿಕೆಯನ್ನು ರಚಿಸುವ ಕುರಿತು ನೀವು ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳಬೇಕು.
- ನಾವು ಅದರಲ್ಲೂ ಸಮಾಜದ ಅತ್ಯಂತ ಬದಿಗೊತ್ತಲ್ಪಟ್ಟ ಮಕ್ಕಳು ವ್ಯವಸ್ಥಿತವಾಗಿ, ನಿರಂತರವಾಗಿ, ನಮ್ಮ ಗ್ರಾಮ ಪಂಚಾಯತ್‌ಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ರಾಜ್ಯದ ಎಲ್ಲಾ ಗ್ರಾಮ

ಪಂಚಾಯತ್‌ಗಳು **'ಮಕ್ಕಳ ಪಂಚಾಯತ್'** ನಂತಹ ವ್ಯವಸ್ಥೆಗಳನ್ನು ರಚಿಸಲು ಅನುಕೂಲವಾಗುವಂತೆ ಸೂಕ್ತ ಕ್ರಮಕೈಗೊಳ್ಳಬೇಕು. ಇದರಿಂದಾಗಿ ಮಕ್ಕಳು ಗ್ರಾಮ ಪಂಚಾಯತ್ ಮಟ್ಟದಲ್ಲಿ ಭಾಗವಹಿಸಿ, ಕೊಡುವ ವಿಷಯಗಳು ರಾಜ್ಯ ಮಟ್ಟದವರೆಗೆ ಯೋಜನೆಯ ತಯಾರಿಕೆಯಲ್ಲಿ ಸಹ ಪ್ರಯೋಜನವಾಗುವ ಹಾಗೆ ಕ್ರಮಕೈಗೊಳ್ಳಬೇಕು. ಉಡುಪಿ ಜಿಲ್ಲೆಯ ಕುಂದಾಪುರ ತಾಲೋಕಿನಲ್ಲಿ ಗ್ರಾಮ ಪಂಚಾಯತುಗಳು 'ಮಕ್ಕಳ ಪಂಚಾಯತ್' ನ್ನು ಸ್ಥಾಪಿಸಿವೆ. ಇದೇ ಮಾದರಿಯಲ್ಲಿ ರಾಜದ ಎಲ್ಲಾ ಗ್ರಾಮ ಪಂಚಾಯತು ಹಾಗೂ ನಗರ ಸ್ಥಳೀಯಾಡಳಿತ ಸರ್ಕಾರಗಳ ಪ್ರದೇಶಗಳಲ್ಲಿ ಆಗಬೇಕು.

- ಉಡುಪಿ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಹಂತಗಳ ಸ್ಥಳೀಯ ಸರ್ಕಾರಗಳಲ್ಲಿ, ನಾವು ಎತ್ತಿದ ಸಮಸ್ಯೆಗಳ ಪರಿಹಾರಕ್ಕಾಗಿ ಸ್ಥಳೀಯ ಸರ್ಕಾರಗಳಿಗೆ ಹಣದ ಅವಶ್ಯಕತೆ ಇರುತ್ತದೆ ಆ ಹಣವನ್ನು ವಿಶೇಷ ಅನುಧಾನವಾಗಿ ಕೊಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಹಾಗೆ ಖರ್ಚಾದ ಹಣದ ಬಗ್ಗೆ ಸ್ಥಳೀಯ ಸರ್ಕಾರಗಳು ಮಕ್ಕಳಿಗೆ ವರದಿ ಸಲ್ಲಿಸುವ ಬಗ್ಗೆ ಸಹ ವ್ಯವಸ್ಥೆ ಮಾಡಬೇಕು.
- ನಮ್ಮ ಅಗತ್ಯಗಳಿಗೆ ಅನುಗುಣವಾಗುವಂತೆ ಮಾಹಿತಿಗಳನ್ನು ಪಡೆದುಕೊಳ್ಳಲು, ಹಂಚಿಕೊಳ್ಳಲು ಅನುಕೂಲವಾಗುವಂತೆ ಮಾಹಿತಿ ಸಂಪನ್ಮೂಲ ಕೇಂದ್ರಗಳನ್ನು ರಚಿಸಲು ಕ್ರಮ ಕೈಗೊಳ್ಳಬೇಕು. ಪ್ರತಿ ಪಂಚಾಯತ್‌ನಲ್ಲಿ ಒಂದು ಹಾಗೂ ನಗರ ಪ್ರದೇಶಗಳಲ್ಲಾದರೆ ಒಂದು ವಾರ್ಡಿಗೆ ಕನಿಷ್ಟ 3 ಕೇಂದ್ರಗಳು ಇರುವ ಹಾಗೆ ಕ್ರಮ ಕೈಗೊಳ್ಳಬೇಕು.
- ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿ ನಮಗೆ ಸಮಸ್ಯೆಗಳು ಬಂದಾಗ, ಅದರಲ್ಲೂ ಕಷ್ಟದಲ್ಲಿರುವ ನಮಗೆ ಸಮಸ್ಯೆಗಳು ಬಂದಾಗ ಮಕ್ಕಳ ಮಾತನ್ನು ಕೇಳುವವರನ್ನು ಮಕ್ಕಳ ಮಿತ್ರರಾಗಿ ಆಯ್ಕೆ ಮಾಡಿಕೊಂಡಿದ್ದೇವೆ. ಅವರು ತಕ್ಷಣ ಕಷ್ಟದಲ್ಲಿವ ನಮ್ಮನ್ನು ಸ್ಪಂದಿಸುತ್ತಾರೆ. ಸರ್ಕಾರ ಅವರನ್ನು ಗುರುತಿಸಿ ಅವರಿಗೆ ಮಾನ್ಯತೆ ಕೊಡಬೇಕು. ಮಕ್ಕಳ ವಿಷಯದಲ್ಲಿ ಚರ್ಚೆ ಆಗುವಾಗ ಅವರನ್ನು ಹಾಗೂ ಮಕ್ಕಳ ಸಂಘಟನೆಗಳನ್ನು ಕೂಡಾ ಕರೆಯಬೇಕು.
- ನಿಮ್ಮ ಸರ್ಕಾರದಲ್ಲಿನ ಎಲ್ಲಾ ಮಂತ್ರಿಗಳು, ನಿಮ್ಮ ರಾಜಕೀಯ ಪಕ್ಷಗಳಿಂದ ಆಯ್ಕೆಯಾದ ವಿಧಾನ ಸಭಾ ಸದಸ್ಯರು, ಮಕ್ಕಳ ಹಕ್ಕುಗಳ ರಕ್ಷಣೆಗೆ ಸದಾ ಬದ್ದರಾಗಿರುವಂತೆ ನೋಡಿಕೊಳ್ಳಬೇಕು. ಮಕ್ಕಳ ಹಿತಾಸಕ್ತಿಗಳನ್ನು ಸಹ ಪ್ರತಿನಿಧಿಸಬೇಕಾದವರು ಎಂಬ ಅರಿವನ್ನು ಅವರಿಗೆ ಮೂಡಿಸಬೇಕು. ನಿಮ್ಮ ರಾಜಕೀಯ ಪಕ್ಷದ ಪ್ರತಿಯೊಬ್ಬ ವಿಧಾನಸಭಾ ಸದಸ್ಯರೂ ತಮ್ಮ ಕ್ಷೇತ್ರದಲ್ಲಿ ಕನಿಷ್ಟ ವರ್ಷಕ್ಕೆ ಒಂದು ಬಾರಿ ಮಕ್ಕಳನ್ನು ಜನ ಸಂಪರ್ಕ ಸಭೆಯ ಮೂಲಕ ಬೇಟಿಯಾಗುವ ಬಗ್ಗೆ ಕ್ರಮ ಕೈಗೊಳ್ಳಬೇಕು. ನಾವು ನೇರವಾಗಿ ಮುಖತಃ

ಅಥವಾ ಪತ್ರ, ದೂರವಾಣಿಗಳ ಮೂಲಕ ನಾವು ನಿಮ್ಮ ಪಕ್ಷದ ವಿಧಾನ ಸಭಾ ಸದಸ್ಯರನ್ನು ಬೇಟಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಮ್ಮ ಸಂಘಗಳ ಪ್ರತಿನಿಧಿಗಳನ್ನು ವರ್ಷಕ್ಕೆ ಒಮ್ಮೆಯಾದರೂ ಶಾಸನ ಸಭೆಗೆ ಆಹ್ವಾನಿಸಿ ಅವರ ಅಭಿಪ್ರಾಯಗಳನ್ನು ಶಾಸಕರು ಕೇಳಿಸಿಕೊಳ್ಳಲು ವ್ಯವಸ್ಥೆ ಮಾಡಬೇಕು.

- ಮಕ್ಕಳ ಭಾಗವಹಿಸುವಿಕೆಗೆ ಸಂಬಂಧಿಸಿ ತಾಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಮಕ್ಕಳ ಜಾರಿಪಡೆ ರಚನೆಯಾಗಬೇಕು

**ಮಕ್ಕಳ ಸಂರಕ್ಷಣೆಯ ಹಕ್ಕಿಗೆ ನಿಮ್ಮ ಬದ್ಧತೆ:–**

- ಉಡುಪಿ ಜಿಲ್ಲೆಯಲ್ಲಿ ಮಕ್ಕಳಾದ ನಮಗೆ ವಿವಿಧ ರೀತಿಯಲ್ಲಿ ರಕ್ಷಣೆ ಇಲ್ಲದೆ ತೊಂದರೆಯಗುತ್ತಿದೆ. ಕೆಲವು ಕಡೆ ನಮಗೆ ರಕ್ಷಣೆ ಅಗತ್ಯವಾದಾಗ ಸೂಕ್ತ ಕ್ರಮ ಕೈಗೊಳ್ಳಬೇಕು. ಮಕ್ಕಳಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು 24 ಗಂಟೆಗಳೂ ಕೆಲಸ ಮಾಡುವ ಉಚಿತ ದೂರವಾಣೆ, ದೂರವಾಣಿ ಸೌಲಭ್ಯ, ಎಲ್ಲೆಡೆ ಉಚಿತ ಅಂಚೆ ಕಾರ್ಡು ವ್ಯವಸ್ಥೆ, ಮಕ್ಕಳ ಪಂಚಯತ್‌ನಂತಹ ವ್ಯವಸ್ಥೆಗಳು, ಹೀಗೆ ಸಂಕಷ್ಟದಲ್ಲಿರುವ ಮಕ್ಕಳ ನೆರವು ಪಡೆದುಕೊಳ್ಳಲು ಅಗತ್ಯವಾದ ವ್ಯವಸ್ಥೆಗಳನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಬೇಕು.
- ನಮಗೆ ಅಪಾಯಕಾರಿಯಾಗಿರುವ ಕೆಂಪು ಕಲ್ಲುಕೋರೆ, ಶಿಲೆಕಲ್ಲುಕೋರೆ, ಇಂಗು ಗುಂಡಿ, ಕೆರೆ, ಕೃಷಿ ಹೊಂಡ, ತೆರೆದ ಬಾವಿ, ಕ್ವಜೆ ಹೊಂಡ (ಹಂಚಿನ ಕಾರ್ಖಾನೆಯ ಕಚ್ಚಾವಸ್ತುವಾದ ಕ್ವಜೆ, ಕುಂಬಾರ್ ಮಣ್ಣು/ ಜೇಡಿ ಮಣ್ಣನ್ನು ತೆಗೆದು ಆಳವಾದ) ಮದಗಗಳಿಂದ ಈ ಎಲ್ಲಾ ಜಾಗಗಳಲ್ಲಿ ನೀರು ತುಂಬುತ್ತದೆ. ಈ ಸ್ಥಳಗಳನ್ನು ಬಳಸಿ ನಾವು ಶಾಲೆ, ಕಾಲೇಜು, ಬಸ್ ನಿಲ್ದಾಣ, ಮುಂತಾದ ಅಗತ್ಯ ಸ್ಥಳಗಳಿಗೆ ಹೋಗುವಾಗ ಈ ಸ್ಥಳಗಳಲ್ಲಿ ಅಪಾಯವನ್ನು ತಪ್ಪಿಸಲು ಅವುಗಳಿಗೆ ಸೂಕ್ತ ರಕ್ಷಣಾ ಬೇಲಿ ನಿರ್ಮಿಸಬೇಕು. ಈ ಬಗ್ಗೆ ಆಯಾಯ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಅವುಗಳನ್ನು ಗುರುತಿಸುವ ಕಾರ್ಯವನ್ನು ತಕ್ಷಣ ಮಾಡಬೇಕು.
- ಅಪಾಯಕಾರಿ ಸ್ಥಳಗಳನ್ನು ದಾಟಲು ಹಲವಾರು ಕಡೆ ತಾತ್ಕಲಿಕವಾಗಿ ಮರ, ಬಿದಿರು, ಅಡಿಕೆ ಮರಗಳನ್ನು ಬಳಸಿ ಕಾಲು ಸಂಕ ನಿರ್ಮಿಸಿರುತ್ತಾರೆ. ಅದರ ಮೇಲೆ ದಾಟಿ ಹೋಗುವುದು ನಮಗೆ ಅಪಾಯವಾಗುತ್ತದೆ.
- ರಾಜ್ಯ ರಸ್ತೆ, ಹೆದ್ದಾರಿಗಳನ್ನು ದಾಟುವಾಗ, ಸೈಕಲ್‌ನಲ್ಲಿ ಹೋಗುವಾಗ, ನಡೆದು ಹೋಗುವಾಗ ಸಂತೆಗೆ, ಆಸ್ಪತ್ರೆಗೆ ಹೋಗುವಾಗ ನಮಗೆ ರಾಜ್ಯ ಹೆದ್ದಾರಿಗಳನ್ನು ದಾಟಲು ಕಷ್ಟವಾಗುತ್ತದೆ. ಆದ್ದರಿಂದ ನಾವು ಫಲಕ,

ಸೂಚನಾ ಫಲಕ ಇಲ್ಲದೆ ಹೋದರೆ ನಮಗೆ ಅವಗಡಗಳು ಆಗುತ್ತದೆ. ಸೂಕ್ತ ಸೂಚನಾ ಫಲಗಳನ್ನು ಹಾಕಬೇಕು.

- ನಮ್ಮ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಹಾದುಗೋಗಿದ್ದು ದಾಟುವಾಗ ಅನೇಕ ರೀತಿಯಲ್ಲಿ ಅಪಾಯಗಳು ಆಗಿರುತ್ತದೆ. ಅವುಗಳಿಗೆ ಸೂಕ್ತ ರಕ್ಷಣೆ ಮಾಡಬೇಕು.
- ಹೆಣ್ಣು ಮಕ್ಕಳಿಗೆ ಬಸ್ಸು, ರೈಲ್ವೆ ಮುಂತಾದ ವಾಹನದಲ್ಲಿ ಹೋಗುವಾಗ ಕಿರುಕುಳ ಕೊಡುತ್ತಾರೆ. ಇಂತಹ ಸಮಸ್ಯೆಗಳನ್ನು ಹೇಳಿಕೊಳ್ಳಲು ಮಕ್ಕಳ ಮಿತ್ರ, ಪೋಲಿಸರ ಅವಶ್ಯಕತೆ ಬೇಕು.
- ಹೆಣ್ಣು ಮಕ್ಕಳ ಜೊತೆ ಅಸಭ್ಯ ವರ್ತನೆ ಮುಂತಾದ ಶೋಷಣೆಗಳು ಆಗುತ್ತದೆ. ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು.
- ಅಗತ್ಯ ಇರುವ ಮಕ್ಕಳಿಗೆ ಭಾವನಾತ್ಮಕ ಬೆಂಬಲ ಹಾಗೂ ಸೂಕ್ತ ಮಾರ್ಗದರ್ಶನ ಪಡೆದುಕೊಳ್ಳಲು ಆಪ್ತ ಸಲಹಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಬೇಕು.
- ಹೆಣ್ಣು ಮಕ್ಕಳ ಅಗತ್ಯಕ್ಕೆ ಪ್ರತ್ಯೇಕ ಆಪ್ತ ಸಲಹಾ ಕೇಂದ್ರಗಳು ಹಾಗೂ ಪರ್ಯಾಯ ವಸತಿ ಗೃಹಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕು.
- ರಾಜ್ಯ ಸರ್ಕಾರ ಎಲ್ಲಾ ಮಕ್ಕಳನ್ನು (ದುಡಿಯುವ ಮಕ್ಕಳು, ವಿಶೇಷ ಸಾಮಾರ್ಥ್ಯವುಳ್ಳ ಮಕ್ಕಳು, ವಲಸೆ ಮಕ್ಕಳು, ಶಾಲಾ ಮಕ್ಕಳು) ಯಾವುದೇ ಕಾರಣಕ್ಕಾಗಿಯೂ ಅಪರಾಧಿಗಳ ತರಹ ಅಥವಾ ಕಾನೂನಿನ ಜೊತೆ ಸಂಘರ್ಷ ಇರುವ ಮಕ್ಕಳೆಂದು ಪರಿಗಣಿಸಬಾರದು. ದುಡಿಯುವ ಮಕ್ಕಳ ನೈಜ ಅಗತ್ಯಗಳನ್ನು ಗುರುತಿಸಿ ಅವುಗಳನ್ನು ಪೂರೈಸಲು ಅಗತ್ಯ ಕಾರ್ಯತಂತ್ರಗಳನ್ನು ರೂಪಿಸಬೇಕು. ದುಡಿಯುವ ಮಕ್ಕಳು ಹಾಗೂ ಅವರ ಸಮದಾಯದ ಪರಿಸ್ಥಿತಿ ಬಗ್ಗೆ ಬಡತನ ನಕ್ಷೆ ಮಾಡಬೇಕು. ಅದರ ನೆರವಿನಿಂದ ಪ್ರತಿ ಮಗು ಪ್ರದೇಶದ ಸಮಸ್ಯೆಗಳ ನಿವಾರಣೆಗೆ ಅಗತ್ಯವಾದ ವಿಶಿಷ್ಟ ಯೋಜನೆಗಳನ್ನು ರೂಪಿಸಬೇಕು.
- ಉಡುಪಿ ಜಿಲ್ಲೆಯಲ್ಲಿ ದುಡಿಯುವ ಮಕ್ಕಳ ಸಂಖ್ಯೆ ಹೆಚ್ಚು ಇರುವ ಪ್ರದೇಶಗಳಲ್ಲಿ ಅವರ ಅನುಕೂಲಕ್ಕೆ ಉಚಿತ ವಸತಿ ನಿಲಯಗಳನ್ನು ತೆರೆಯುವ ಬಗ್ಗೆ ಕ್ರಮ ಕೈಗೊಳ್ಳಬೇಕು.
- ಮಕ್ಕಳಾದ ನಮಗೆ ಬದುಕಲು ಅಗತ್ಯವಾದ ಶಿಕ್ಷಣ ಸಿಗಬೇಕು. ವೃತ್ತಿ ಶಿಕ್ಷಣವನ್ನು ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳಲ್ಲಿ ಜಾರಿಗೆ ತರಬೇಕು. 14 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳಿಗೂ ಅವರವರ ಶಾಲೆಗಳಲ್ಲೆ ವೃತ್ತಿ ಶಿಕ್ಷಣಕ್ಕೆ ವ್ಯವಸ್ಥೆ ಮಾಡಬೇಕು.

- ಉಡುಪಿ ಜಿಲ್ಲೆಯಲ್ಲಿ ಕನಿಷ್ಟ ಕೂಲಿ ಕಾನೂನು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ರಾಷ್ಟ್ರೀಯ ಆಹಾರ ಖಾತರಿ ಯೋಜನೆಗಳಂತಹ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಕಡೆ ಪರಿಣಾಮಕಾರಿಯಾಗಿ ಜಾರಿಗೆ ತರಲು ಕ್ರಮ ಕೈಗೊಳ್ಳಬೇಕು. ಈ ಯೋಜನೆಗಳ ಪ್ರತಿಫಲ ಸಮುದಾಯದ ಅತ್ಯಂತ ಬಡವರಿಗೆ ಸಿಗುವಂತಾಗಬೇಕು. ಆಗ ಅಂತಹ ಕುಟುಂಬಗಳ ಮಕ್ಕಳು ಅಪಾಯಕಾರಿ ದುಡಿಮೆಗೆ ಹೋಗುವುದು ಕಡಿಮೆಯಾಗುತ್ತದೆ.
- ನಮ್ಮ ಜಿಲ್ಲೆಯ ಗ್ರಾಮೀಣ ಪ್ರದೇಶದ ಕೃಷಿ, ಬುಟ್ಟಿ, ಮಗ್ಗ, ಮಡಿಕೆ, ಮರಕೆಲಸ, ಗುಡಿ ಕೈಗಾರಿಕೆ, ಕುಶಲ ಕರ್ಮಿಗಳಿಂದ ತಯಾರಾದ ಉತ್ಪಾದನೆಗಳನ್ನು ಮಾರಾಟ ಮಾಡಲು ಅಗತ್ಯವಾದ ಬೆಂಬಲ ವ್ಯವಸ್ಥೆಗಳನ್ನು ಆರಂಭಿಸಬೇಕು. ಇದರಿಂದ ನಮ್ಮ ಸಮುದಾಯದ ಜನರು ಉತ್ತಮ ಜೀವನ ಕಲ್ಪಿಸಲು ಸಾಧ್ಯ ಹಾಗೂ ನಮಗೆ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ.
- ಉಡುಪಿ ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲ ಕಡೆ ಬೀದಿ ಮೇಲೆ ಇರುವ ಮಕ್ಕಳು ಹಾಗೂ ಶಾಲೆಬಿಟ್ಟ ಮಕ್ಕಳ ಬಗ್ಗೆ ಸರ್ವೆಯಿಂದ, ಅವರ ನಿಜವಾದ ಸಮಸ್ಯೆ ಮತ್ತು ಅಗತ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗಬೇಕು. ಅವರ ಅಗತ್ಯದ ಆಧಾರದ ಮೇಲೆ ಅವರಿಗೆ ವಸತಿ, ಶಿಕ್ಷಣ, ವೃತ್ತಿ ಶಿಕ್ಷಣ ಒದಗಿಸಲು ಯೋಜನೆಗಳಾಗಬೇಕು. ಅವರನ್ನು ಗುರುತಿಸಿದ ನಂತರ ಪುನರ್ವಸತಿಯ ಹೆಸರಿನಲ್ಲಿ ಅವರಿಗೆ ಯಾವುದೇ ರೀತಿ ಹಿಂಸೆ, ಶೋಷಣೆ, ಒತ್ತಡಗಳು ಆಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ಭ್ರೂಣ ಲಿಂಗ ಪರೀಕ್ಷೆ, ಹೆಣ್ಣು ಭ್ರೂಣ ಹತ್ಯೆ ಹಾಗೂ ವರದಕ್ಷಣೆಯಂತಹ ಪಿಡುಗುಗಳನ್ನು ಆಚರಿಸುವವರಿಗೆ, ಅದಕ್ಕೆ ಬೆಂಬಲಿಸುವವರ ವಿರುದ್ದ ಕಠಿಣ ಕಾನೂನು ಕ್ರಮಕ್ಕೆ ಮುಂದಾಗಬೇಕು. ಇಂತಹ ಅನಿಷ್ಟ ಸಾಮಾಜಿಕ ಪದ್ದತಿಗಳ ವಿರುದ್ದ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವಂತಾಗಬೇಕು. ಶಿಕ್ಷಣದಲ್ಲೂ ಸಹ ಇಂತಹ ವಿಚಾರಗಳು ಮಕ್ಕಳಿಗೆ ತಿಳಿಯುವಂತಾಗಬೇಕು.
- ಬಾಲ ಮಂದಿರಗಳು ಮಕ್ಕಳ ಸ್ನೇಹಿಯಾಗಿ ಇಲ್ಲದೆ ಇರುವುದರಿಂದ ಬಾಲ ನ್ಯಾಯ ಮಂದಿರದಲ್ಲಿ ಇರುವ ಮಕ್ಕಳು ಅನಿವಾರ್ಯ ಕಾರಣಗಳಿಂದ ಓಡಿ ಹೋಗುತ್ತಾರೆ. ಅವರಿಗೆ ಅಲ್ಲಿ ಅಗತ್ಯವಾದ ಆಪ್ತ ಸಲಹೆಗಾರರು, ಕಲಿಕೆಗೆ, ಆಟೋಟಗಳಿಗೆ ಅವಕಾಶಗಳು, ಒಳ್ಳೆಯ ಪೌಷ್ಠಿಕ ಆಹಾರ ಸಿಗುವಂತೆ ಆಗಬೇಕು. ಬಾಲ ಮಂದಿರಗಳು ಮಕ್ಕಳಿಗೆ ಹಿಂಸೆ, ಶಿಕ್ಷೆ ಕೋಡುವ, ಮಕ್ಕಳಿಗೆ ಅವಮಾನ ಮಾಡುವ ಸ್ಥಳಗಳಾಗದಂತೆ ಅವುಗಳನ್ನು ಕಾಪಾಡಲು ಸರ್ಕಾರಗಳನ್ನು ತಾವು ಸದಾ ಎಚ್ಚರಸುತ್ತಾ ಇರಬೇಕು.

- ಆರೋಪ ಎದುರಿಸುತ್ತಿರುವ ಮಕ್ಕಳೆಲ್ಲರಿಗೂ ತುರ್ತಾಗಿ ಕಾನೂನು ಮಂಡಲಿಯಿಂದ ನೇಮಿಸಲ್ಪಡುವ ತಜ್ಞ ವಕೀಲರು ಹಾಗೂ ಸಮಾಜ ಸೇವಕರ ಸಹಾಯ ಸಿಗುವಂತೆ ವ್ಯವಸ್ಥೆ ಮಾಡಬೇಕು.
- ಮಕ್ಕಳಿಗೆ ಗರಿಷ್ಠ ಮಟ್ಟದಲ್ಲಿ ನೆರವಾಗುವಾಗಲು, ಮಕ್ಕಳ ಮಿತ್ರು, ಮಕ್ಕಳ ಗ್ರಾಮಸಭೆ ಮುಂತಾದ ಮಕ್ಕಳ ಸ್ನೇಹಿ ವ್ಯವಸ್ಥೆಗಳ ಜೊತೆ ಸೇರಿ ಕೆಲಸ ಮಾಡಲು ರಾಜ್ಯದ ಎಲ್ಲಾ ಹಂತಗಳ ಅಧಿಕಾರಿಗಳು ಹಾಗೂ ಪೋಲಿಸರಿಗೆ ಅಗತ್ಯವಾದ ತರಬೇತಿಗೆ ವ್ಯವಸ್ಥೆ ಮಾಡಬೇಕು. ಬಾಲನ್ಯಾಯ ಖಾಯ್ದೆಯಡಿಯಲ್ಲಿ ತಿಳಿಸಿದಂತೆ ನಿಗದಿತ ಸ್ಥಳಗಳಲ್ಲಿ ಸಮರ್ಥವಾದ ಬಾಲ ನ್ಯಾಯ ಪೋಲಿಸ್ ಘಟಕಗಳನ್ನು ರಚಿಸಲು ಕ್ರಮಕೈಗೂಳ್ಳಬೇಕು.
- ಜಿಲ್ಲೆಯಲ್ಲಿ ಎಲ್ಲೇ ಗಲಭೆ, ಸುನಾಮಿ, ಪ್ರಕೃತಿ ವಿಕೋಪ ಮುಂತಾದ ಸಂಕಷ್ಟ ವಾದಾಗ ಅದನ್ನು ಅನುಭವಿಸುವವರು ಮಕ್ಕಳು. ಆ ತರಹ ಘಟನೆಗಳು ಸಂಭವಿಸಿದಾಗ ಮಕ್ಕಳ ರಕ್ಷಣೆಗೆ ಆದ್ಯತೆ ಕೂಡಬೇಕು. ಘಟನೆಗಳು ಆಗದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲು ಎಲ್ಲರು ಮುಂದಾಗಬೇಕು.

**ದುಡಿಯುವ ಮಕ್ಕಳ ಸಮಸ್ಯೆಗಳ ನಿವಾರಣೆಗೆ ಅಗತ್ಯವಾದ ಯೋಜನೆಗಳನ್ನು ರೂಪಿಸಬೇಕು.**

- 14 ವರ್ಷ ಮೇಲ್ಪಟ್ಟ ದುಡಿಯುವ ಮಕ್ಕಳ ಅಗತ್ಯಕ್ಕೆ ಅನುಗುಣವಾಗಿ, ವೃತ್ತಿ ತರಬೇತಿಗಳನ್ನು ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ಒದಗಿಸುವ ವ್ಯವಸ್ಥೆ ಆಗಬೇಕು. ಇದರಿಂದಾಗಿ ಅವರಿಗೆ ಮುಂದೆ ಉತ್ತಮ ಉದ್ಯೋಗದ ಭರವಸೆ ಸಿಕ್ಕಂತಾಗುತ್ತದೆ. ಆದರೆ ಹಾಗೆ ವ್ಯವಸ್ಥೆಯನ್ನು ಮಾಡುವ
- ಮೊದಲು ಅವರಿಗೆ ಯಾವ ರೀತಿಯ ಕೌಶಲ್ಯಗಳುಬೇಕೆಂಬ ಬಗ್ಗೆ, ಅದರ ಪ್ರಯೋಜನ ಪಡೆಯುವ ದುಡಿಯುವ ಮಕ್ಕಳು ಹಾಗು ಯುವ ಜನರ ಜೊತೆ ಚರ್ಚಿಸಿ ಯೋಜನೆಗಳನ್ನು ರೂಪಿಸುವಂತಾಗಬೇಕು.

**ವಲಸೆ ಬಂದ ಕಾರ್ಮಿಕ ಸಮುದಾಯದ ಮಕ್ಕಳ ಸಮಸ್ಯೆಗಳು**

**ಬಾಲ್ಯವಿವಾಹ:–**

- ಉಡುಪಿ ಜಿಲ್ಲೆಗೆ ವಲಸೆ ಬರುವ ಮಕ್ಕಳಿಗೆ ಬಾಲ್ಯ ವಿವಾಹ ಪಿಡುಗುಗಳನ್ನು ನಿಲ್ಲಿಸಲು ತಾವು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. ಜಿಲ್ಲೆಯ ವ್ಯಾಪ್ತಿಯಲ್ಲಿ ಬಾಲ್ಯವಿವಾಹ ಆಗದಂತೆ ಕ್ರಮಕೈಗೂಳ್ಳಲು ಆಯಾ

ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ರಾಜ್ಯದ ಎಲ್ಲೆಡೆ ಸುಲಭವಾಗಿ ಜನನ ಹಾಗೂ ಮದುವೆಗಳನ್ನು ನೊಂದಾವಣೆ ಸೂಕ್ತ ವ್ಯವಸ್ಥೆ ಮಾಡಬೇಕು.

- ಉಡುಪಿ ಜಿಲ್ಲೆಯ ವಿವಿದೆಡೆಗೆ ವಲಸೆ ಬಂದ ಸ್ಥಳಗಳಲ್ಲಿ, ವಲಸೆ ಬಂದ ಸಮುದಾಯಗಳ ಮಕ್ಕಳು ಸುರಕ್ಷಿತ ಸ್ಥಳದಲ್ಲಿ ಆರೈಕೆ ಮತ್ತು ಶಿಕ್ಷಣ ಪಡೆಯಲು ಅವರಿಗೆ ಅನುಕೂಲವಾಗುವಂತೆ ಉಚಿತ ವಿಧ್ಯಾರ್ಥಿ ನಿಲಯಗಳ ಹಾಗೂ ಶಿಶು ಆರೈಕಾ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರವನ್ನು ಒತ್ತಾಯಿಸಬೇಕು.

- ಉಡುಪಿ ಜಿಲ್ಲೆಗೆ ವಲಸೆ ಬಂದ ಸಮುದಾಯದ ಮಕ್ಕಳ ಮತ್ತು ಹಿರಿಯರಿಗೆ ಅವರು ಈಗಿರುವ ಸ್ಥಳದಲ್ಲಿ ವಸತಿ, ಕುಡಿಯುವ ನೀರು, ಪಡಿತರ ಮುಂತಾದ ಮೂಲಭೂತ ಸೌಲಭ್ಯಗಳನ್ನು ದೂರಕುವಂತೆ ಕ್ರಮಕೈಗೊಳ್ಳಬೇಕು.

- ಉಡುಪಿ ಜಿಲ್ಲೆಗೆ ವಲಸೆ ಬರುವ ಜನರ ಮೂಲ ಸ್ಥಳಗಳಲ್ಲಿ ಉಚಿತ ವಸತಿ ನಿಲಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕು. ಇದರಿಂದಾಗಿ ವಲಸೆ ಬರುವ ಕುಟುಂಬದ ಮಕ್ಕಳು ತಮ್ಮ ಮೂಲಸ್ಥಳದಲ್ಲೇ ಉಳಿಯಲು ನೆರವಾಗುತ್ತದೆ.

- ಬೇರೆ ಬೇರೆ ರಾಜ್ಯದಿಂದ ಮಕ್ಕಳು ಬರುತ್ತಾರೆ ಅಥವಾ ಹೋಗುತ್ತಾರೆ ಅಂತಹ ಮಕ್ಕಳು ತುಂಬಾ ಸಂಕಷ್ಟದಲ್ಲಿ ಸಿಕ್ಕಿಬೀಳುತ್ತಾರೆ. ಅಂತಹ ಮಕ್ಕಳಿಗೆ ಸೂಕ್ತವಾದ ಪುನರ್ವಸತಿ ಸಿಗುವಂತೆ ವ್ಯವಸ್ಥೆ ಮಾಡಬೇಕು. ಅವರಿಗೆ ಪುನರ್ವಸತಿಯನ್ನು ರೂಪಿಸುವಾಗ ಆ ಮಕ್ಕಳ ಮತ್ತು ಅವರ ಕುಟುಂಬಗಳ ಜೊತೆ ಸೇರಿ ಯೋಜನೆ ರೂಪಿಸುವತ್ತ ಗಮನ ಹರಿಸಲು ವ್ಯವಸ್ಥೆ ಮಾಡಬೇಕು.

**ಮಕ್ಕಳ ಸೌಲಭ್ಯ ಪಡೆದುಕೊಳ್ಳುವ ಹಕ್ಕಿಗೆ ನಿಮ್ಮ ಬದ್ದತೆ.**

- ರಾಜ್ಯದ ಯಾರೊಬ್ಬರೂ ಜಾತಿ, ಲಿಂಗ, ಸಾಮಾರ್ಥ್ಯ ಹೀಗೆ ಯಾವುದೇ ರೀತಿಯಲ್ಲೂ ಮಕ್ಕಳ ನಡುವೆ ತಾರತಮ್ಯವನ್ನು ಮಾಡದಂತೆ ಆಗಬೇಕು. ಒಮ್ಮೆ ಯಾರಾದರೂ ಈ ರೀತಿಯಲ್ಲಿ ಮಕ್ಕಳ ವಿರುದ್ಧ ತಾರತಮ್ಯ ಮಾಡಿದರೆ ಅವರ ವಿರುದ್ಧ ತಕ್ಷಣ ಕಠಿಣ ಕ್ರಮಕ್ಕೆ ವ್ಯವಸ್ಥೆ ಮಾಡಬೇಕು. ತಮ್ಮ ವಿರುದ್ಧ ಯಾವುದೇ ರೀತಿಯ ತಾರತಮ್ಯ, ಶೋಷಣೆಗಳಾದಲ್ಲಿ ಅವುಗಳ ಬಗ್ಗೆ ದೂರು ಕೊಡಲು ಮಕ್ಕಳು ಇರುವ ಸಂಸ್ಥೆ, ಶಾಲೆ, ಸಮುದಾಯ, ಪ್ರದೇಶಗಳು ಸೇರಿದಂತೆ ಎಲ್ಲೆಡೆ ಸೂಕ್ತ ವ್ಯವಸ್ಥೆಗಳಾಗಬೇಕು. ಆ ತರಹ ವ್ಯವಸ್ಥೆಗಳ ಉಪಯೋಗದ ಬಗ್ಗೆ ಎಲ್ಲಾ ಕಡೆ ಪ್ರಚಾರ ಮಾಡುವಂತಾಗಬೇಕು

- ದುಡಿಯುವ ಮಕ್ಕಳೂ ಸೇರಿದಂತೆ ಸಮಾಜದ ಎಲ್ಲಾ ಬದಿಗೊತ್ತಲ್ಪಟ್ಟ ಜನರು ಹಾಗೂ ಮಕ್ಕಳಿಗೆ ಎಲ್ಲಾ ಚಿಕಿತ್ಸೆಗಳು ಉಚಿತವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು.
- ಬಡ ಕುಟುಂಬಗಳ ಮಕ್ಕಳಿಗೆ ಹೃದಯ ಸಂಬಂಧಿ, ಮೂತ್ರ ಪಿಂಡ ಸಂಬಂಧಿ ಹೀಗೆ ಗಂಭೀರ ಖಾಯಿಲೆಗಳ ಚಿಕಿತ್ಸೆಗೆ ಹಣಕಾಸಿನ ಅಗತ್ಯ ಬಂದಾಗ, ಅದನ್ನು ಸರ್ಕಾರವೇ ಭರಿಸಬೇಕು.
- ಹೆಣ್ಣು ಮಕ್ಕಳು, ವಿಶೇಷ ಸಾಮರ್ಥ್ಯ ಇರುವ ಮಕ್ಕಳು, ದುಡಿಯುವ ಮಕ್ಕಳು, ವಲಸೆ ಬಂದ ಸಮುದಾಯದ ಮಕ್ಕಳೂ ಸೇರಿದಂತೆ ಎಲ್ಲಾ ಮಕ್ಕಳಿಗೂ ಉತ್ತಮ ಗುಣ ಮಟ್ಟದ, ಅರ್ಥಪೂರ್ಣ ಶಿಕ್ಷಣವನ್ನು ದೊರಕಿಸಿಕೊಡಬೇಕು.
- ಉಡುಪಿ ಜಿಲ್ಲೆಯಲ್ಲಿ ಮಕ್ಕಳಿಗೆ ಯಾವುದೇ ರೀತಿಯ ಶಿಕ್ಷೆ ಹಾಗೂ ಅವಮಾನ, ಶೋಷಣೆ ಆಗದ ರೀತಿಯಲ್ಲಿ ಬಿಗಿಯಾದ ನಿಯಮಗಳನ್ನು ಜಾರಿಗೊಳಿಸಬೇಕು. ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಸೂಕ್ತ ರೀತಿಯ ಕಾನೂನು ಕ್ರಮ ಕೈಗೊಳ್ಳುವಂತಾಗಬೇಕು.
- ಸಂಪರ್ಕರಹಿತ ಅತ್ಯಂತ ಬದಿಗೊತ್ತಲ್ಪಟ್ಟ ಪ್ರದೇಶಗಳನ್ನು ಗುರುತಿಸಿ ಅಲ್ಲಿರುವ ಪ್ರಾಥಮಿಕ ಶಾಲೆಯನ್ನು ಮೇಲ್ದರ್ಜೆಗೆ ಏರಿಸುವುದರ ಮೂಲಕ ಆ ಪ್ರದೇಶದ ಅದರಲ್ಲೂ ಹೆಣ್ಣುಮಕ್ಕಳು ಶಾಲೆ ಬಿಡುವ ಪರಿಸ್ಥಿತಿಯನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು
- ಉಡುಪಿ ಜಿಲ್ಲೆಯ ವಿವಿದೆಡೆ ಹಳ್ಳಿ ಪ್ರದೇಶದಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ದೂರದ ಶಾಲೆಗಳಿಗೆ ಕಾಡುದಾರಿಯಲ್ಲಿ ಹೋಗಬೇಕಾಗಿರುವುದರಿಂದ ಉಚಿತ ಶಾಲಾ ವಾಹನ ವ್ಯವಸ್ಥೆ ಮಾಡಬೇಕು.
- ಉಡುಪಿ ಜಿಲ್ಲೆಯ ಕೆಲವು ಕಡೆಗಳಲ್ಲಿ ಮಕ್ಕಳಿಗೆ ಸೂಕ್ತವಾದ ಸ್ಥಳಗಳಲ್ಲಿ ಅಂಗನವಾಡಿ ಇಲ್ಲ. ಇರುವ ಅಂಗನವಾಡಿಗಳಿಗೆ ಸರ್ಕಾರದಿಂದ ಪೌಷ್ಟಿಕ ಆಹಾರ ಸರಿಯಾಗಿ ಸಿಗುತ್ತಿಲ್ಲ. ಸ್ಥಳೀಯವಾಗಿ ಪೌಷ್ಟಿಕ ಆಹಾರ ಸಿಗುವಂತೆ ಆಗಬೇಕು.